


# ಕೈಚಳಕ

ಗೌಡ ಮನೆ ಹತ್ತಿರ ಬರಲು ಹೇಳಿ ಕಳಿಸಿದ್ದರಿಂದ ನರಸ 'ಓಹೋ ಗೌಡ್ರುದ್ದು ಹೋದ ವರ್ಷ ಹೊಲ್ದ್ ಕೊಟ್ಟ ಮೆಟ್ಟು ಸವೆದಿರ್ಬೇಕು. ಪೂರ್ತಿ ಕಾಸೂ ಕೊಡ್ಲಿಲ್ಲ, ಕಣದಲ್ಲಿ ಕೈತುಂಬ ಕಾಳೂ ಕೊಡ್ಲಿಲ್ಲ' ಎಂದುಕೊಳ್ಳುತ್ತಾ ನಡೆದು ಗೌಡರ ಮನೆಯ ಮುಂದೆ ನಿಂತಿದ್ದ. 'ಏನಪ್ಪಾ ಹೇಳಿಕಳಿಸಿದ್ದು ಗೌಡ' ಎಂದು ತಲೆ ಕೆರೆದುಕೊಂಡು ಬಾಗಿಲ ಬಳಿ ಕುಳಿತುಕೊಂಡ. ಗೌಡಂದು, ನರಸಂದು ಒಂದೇ ವಾರಿಗೆ. ನರಸ ಅಂದುಕೊಂಡಂತೆ ಗೌಡ 'ನಿನ್ನ ಇನ್ಯಾತಕ್ಕೆ ಬರೇಳಾನ್ಲ ನರಸ. ನನ್ನ ಬೀಗನ ತಮ್ಮುಂದು ಇನ್ನದಿನ್ನೈದು ದಿನುಕ್ಕೆ ತುಂಬಾಡಿಲಿ ಮದ್ವೆ ಸೆಟ್ಟಾಗೈತೆ. ಮದ್ವೆಗೆ ಒಂದು ಜೊತೆ ಒಳ್ಳೆ ಗಿರ್ಕಿ ಮೆಟ್ಟು ಹೊಲ್ದ್ ಕೊಡು...' ಎಂದು ಗೌಡ ಎರಡು ಬೀಡಿಯನ್ನು ನರಸನ ಕೈಗೆ ಹಾಕಿದ. ಬೀಡಿ ಬಾಯಿಗಿಟ್ಟುಕೊಂಡು ಒಂದು ಧಮ್ ಎಳೆದು ಊದುರ ಬಿಟ್ಟು 'ಯಪ್ಪೊ ಯಾವಾಗಂದ್ರಾವಾಗ ಚರ್ಮ ಎಲ್ಲಿ ಸಿಗ್ತೈತೆ. ಹೋದ್ದೊರ್ಷ ಹೊಲ್ದ್ ಕೊಟ್ಟ ಮೆಟ್ಟಿಂದು ಮೂವತ್ತು ರೂಪಾಯಿ ಬಾಕಿ ಹಂಗೆ ಉಳಿಸ್ಕಂಡಿದ್ದೀಯ. ಕಣದಲ್ಲೂ ಮೊರದ್ ತುಂಬಾ ರಾಗೀನೂ